ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-3 Issue 2, Sep-Oct, 186-192**
**©*IIMRD*, Mysuru**

IIMRD JOURNALS

**www.iimrd.com**

# ಉಪ್ಪಾರ ವೃತ್ತಿ ಸಂಕಥನ

**ಡಾ. ಎಸ್ ಆರ್ ಅಂಜನಪ್ಪ***

*ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರ, ದಾವಣಗೆರೆ.

***ಸಾರಾಂಶ* (Abstract)**

*ವಿಶಾಲವಾದ ಭೌಗೋಳಿಕ ವ್ಯಾಪ್ತಿಯನ್ನು ಹೊಂದಿರುವ ಭರತಖಂಡವು ವಿಶಿಷ್ಟ ಮತ್ತು ವೈವಿಧ್ಯಮಯವಾದ ಭೌಗೋಳಿಕ ಲಕ್ಷಣಗಳನ್ನು ಒಳಗೊಂಡಿದೆ. ಈ ದೇಶದ ಭೌಗೋಳಿಕ ವೈವಿಧ್ಯತೆಯಂತೆ ಇಲ್ಲಿನ ನಿವಾಸಿಗಳ ಬದುಕೂ ಸಹ ವೈವಿಧ್ಯಮಯವಾಗಿದೆ. ಸಾವಿರಾರು ಮತ, ಪಂಥಗಳಿಗೆ ಸೇರಿದ ಜನ ಸಮುದಾಯಗಳು ಪುರಾತನ ಕಾಲದಿಂದಲೂ ಈ ದೇಶದಲ್ಲಿ ವಾಸಿಸುತ್ತಿವೆ. ದ್ರಾವಿಡ ಪೂರ್ವ ಕಾಲದಿಂದ ಬ್ರಿಟೀಷರವರೆಗೆ ಬೇರೆ ಬೇರೆ ಜನಾಂಗಗಳು ಬದುಕಿನ ಮಾರ್ಗೋಪಾಯಗಳನ್ನು ಹುಡುಕಿಕೊಂಡು ಬಂದು ಹೋಗಿದ್ದಾರೆ. ಹೀಗೆ ಅನೇಕ ಸಮುದಾಯಗಳ ಸಮಾಗಮದಿಂದಾಗಿ ಸಂಕೀರ್ಣವಾದ ಸಾಮಾಜಿಕ ವ್ಯವಸ್ಥೆ ನಿರ್ಮಾಣಗೊಂಡಿದ್ದು, ಅಂತಹ ಸಮುದಾಯಗಳಲ್ಲಿ ಉಪ್ಪಾರ ಸಮುದಾಯವು ಕೂಡ ಒಂದಾಗಿದೆ.*

***ಮುಖ್ಯಪದಗಳು* (Keywords):** ಉಪ್ಪಾರ ಜನಾಂಗ, ಜಾತಿ ವ್ಯವಸ್ಥೆ, ವೃತ್ತಿ ಸಂಕಥನ.

**ಪೀಠಿಕೆ**

ಭಿನ್ನ ಸಂಸ್ಕೃತಿಗಳು, ಭಿನ್ನ ಸಮಾಜಗಳು ಬೆಳೆದಂತೆ ಭಿನ್ನತೆಯೂ ಹೆಚ್ಚಿತು. ಅನೇಕ ವರ್ಗ, ವರ್ಣ, ಜಾತಿಗಳು ಬೆಳೆದು ನಿಂತವು. ಈ ಬಗೆಯ ಅನೇಕತೆಯೆ ಭಾರತದ ವೈಶಿಷ್ಟ್ಯತೆಯಾಗಿದೆ. ಇಂತಹ 'ಸಂಕೀರ್ಣವಾದ ಭಾರತೀಯ ಸಂಸ್ಕೃತಿಯ ಒಂದು ಮೂಲಾಂಶವೆಂದರೆ ಅದು ಜಾತಿಪದ್ಧತಿಯಾಗಿದೆ'. ಆದರೆ ಈ ಜಾತಿ ಪದ್ಧತಿಯು ಕೇವಲ ಭಾರತಕ್ಕೆ ಮಾತ್ರ ಸೀಮಿತವಲ್ಲ, ಆದರೂ 'ಜಾತಿ ವ್ಯವಸ್ಥೆ ಭಾರತದಷ್ಟು ಸಂಕೀರ್ಣವಾಗಿ ಒಂದು ರಾಷ್ಟ್ರದ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿರುವುದು ಭಾರತೀಯ ಜಾತಿ ವ್ಯವಸ್ಥೆಯ ಒಂದು ವಿಶಿಷ್ಟ ಲಕ್ಷಣವಾಗಿದೆ.

ವ್ಯಕ್ತಿ ಮಾಡುವ ವೃತ್ತಿಯನ್ನು ಆಧರಿಸಿ ಹುಟ್ಟಿಕೊಂಡ ಜಾತಿಗಳಿಂದಾಗಿ ಸಮಾಜ ವಿಭಾಗವಾಗುತ್ತಾ ನಡೆಯಿತು. 'ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ. ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ' ಎನ್ನುವಂತೆ ಜಾತಿಗಳು ಹುಟ್ಟಿಕೊಂಡವು. ಈ ಸಂದರ್ಭದಲ್ಲಿ ಜಾತಿ ಉಗಮದ

*Please cite this article as: ಅಂಜನಪ್ಪ ಎಸ್ ಆರ್ (2021).* ಉಪ್ಪಾರ ವೃತ್ತಿ ಸಂಕಥನ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(2).* ಪು.ಸಂ. 186–192

ಸಂಕಥನವನ್ನು ಕುರಿತಂತೆ ದೇ.ಜ.ಗೌ ರವರ ಮಾತುಗಳು ಭಾರತೀಯ ಜಾತಿ ವ್ಯವಸ್ಥೆಯ ಹುಟ್ಟನ್ನು ಬಿಚ್ಚಿಡುತ್ತವೆ.

**"**ಲೋ ಮಗ, ಜಾತಿ ಎಂಬುದು ಕಟ್ಟು ಕಥೆ, ಮನುಷ್ಯ ಮಾಡಿಕೊಂಡಿರೋದು, ದೇವರು ಮಾಡಿದ್ದಲ್ಲ. ಒಂದು ಮನೇಲಿ ಏಳು ಜನ ಅಣ್ಣ ತಮ್ಮಂದಿರು. ಅಪ್ಪ ಅವರಿಗೆ ಕೆಲಸ ಹಂಚಿ ಹಾಕಿದ. ಒಬ್ಬ ಕುರಿ ಕಾಯಬೇಕು. ಒಬ್ಬ ಹೊಲ ಉಳಬೇಕು. ಒಬ್ಬ ದನ ಕಾಯಬೇಕು. ಮತ್ತೊಬ್ಬ ಸೈನ್ಯ ಸೇರಬೇಕು. ಇನ್ನೊಬ್ಬ ತರಕಾರಿ ಹೂ ಬೆಳೆಯಬೇಕು. ಮಗದೊಬ್ಬ ಉಪ್ಪು ಜೀರಿಗೆ ಬೇಳೆಗಳನ್ನು ಹೊತ್ತುಕೊಂಡು ಊರೂರಿಗೆ ಹೋಗಿ ಮಾರಬೇಕು. ಉಳಿದವ ನೂಲು ತೆಗೆದು ಬಟ್ಟೆ ನೇಯಬೇಕು. ಒಂದೆರಡು ಪೀಳಿಗೆಯ ತನಕ ಎಲ್ಲರೂ ಒಟ್ಟಿಗೆ ಬಾಳಿದರು. ಕುಟುಂಬ ದೊಡ್ಡದಾದಾಗ ಬೇರೆಯಾದರು. ಪ್ರತಿಯೊಬ್ಬರೂ ತಂತಮ್ಮ ಕಸುಬುಗಳನ್ನು ಬಿಡಲಿಲ್ಲ. ಹೀಗಾಗಿ ಕುರುಬ, ಒಕ್ಕಲಿಗ, ಗೊಲ್ಲ, ಭಂಟ, ತಿಗಳ, ಉಪ್ಪಾರ, ನೇಕಾರ, ಮೊದಲಾದ ಜಾತಿಗಳು ಹುಟ್ಟಿಕೊಂಡವು. ಅವರೊಳಗೆ ಬೇಸರ ಹುಟ್ಟಿಕೊಂಡಾಗ, ದೂರದೂರುಗಳಿಗೆ ವಲಸೆ ಹೋಗಿ ನೆಲಸಿದಾಗ ಸಂಪರ್ಕ, ಕೊಳು, ಕೊಡೆ ನಿಂತುಹೋಗಿ ಅವರೆಲ್ಲರೂ ಬೇರೆ ಬೇರೆಯಾಗಿ (ಪ್ರತ್ಯೇಕತಾವಾದಿಗಳಾಗಿ) ಉಳಿದರು. ಮುಂದೆ ಇವರಲ್ಲಿಯೇ ಬೇರೆ ಬೇರೆ ಜಾತಿಗಳಾಗಿ ಬೇರೆ ಬೇರೆಯಾದರು.**"**

ದೇಜಗೌ ಅವರ ಈ ಜಾತಿ ಮೀಮಾಂಸೆ ಅತ್ಯಂತ ಸರಳವಾಗಿ ಜಾತಿ ಉಗಮದ ಸಂಕಥನವನ್ನು ಕಟ್ಟಿಕೊಡುತ್ತದೆ. ಅಷ್ಟೇ ಅಲ್ಲ ಒಂದೇ ವೃತ್ತಿಯನ್ನು ಅವಲಂಬಿಸಿದ ಜನಗಳೇ ಬೇರೆ ಬೇರೆ ಹೆಸರುಗಳಿಂದ ಗುರುತಿಸಿಕೊಂಡು ಭಾಷೆ, ಭೌಗೋಳಿಕ ಪ್ರದೇಶ ಇತ್ಯಾದಿ ಕಾರಣಗಳಿಂದ ಜಾತಿಯೊಳಗೆ ಉಪಜಾತಿಗಳು ಏರ್ಪಟ್ಟು, ಮುಂದೆ ಉಪಜಾತಿಗಳೇ ಜಾತಿಗಳಾಗಿ ಬದಲಾಗುವುದು ಸಾಮಾಜಿಕ ಪ್ರಕ್ರಿಯೆಯಲ್ಲಿ ಸಾಮಾನ್ಯ ವಿಷಯವಾಗಿರುತ್ತದೆ ಎಂಬ ಅಂಶವನ್ನು ಮನಗಾಣಿಸುತ್ತದೆ.

ಹೀಗೆ ವೃತ್ತಿಗೆ ಸಂಬಂಧಿಸಿದಂತೆ ಆರಂಭವಾದ ಜಾತಿ ವ್ಯವಸ್ಥೆಯಲ್ಲಿ ಅನಂತರ ಈ ಸ್ವರೂಪವು ಹೊರಟು ಹೋಗಿ ಜಾತಿ ಮತ್ತು ವೃತ್ತಿಗಳಿಗೆ ಅವಿನಾಭಾವ ಸಂಬಂಧ ಕಲ್ಪಿತವಾಗಿ ವೃತ್ತಿಯಿಂದ ನಿರ್ಧರಿತವಾಗುತ್ತಿದ್ದ ಜಾತಿ ಹುಟ್ಟಿನಿಂದ ನಿರ್ಧರಿತವಾಗುವ ಸ್ಥಿತಿ ನಿರ್ಮಾಣವಾಯಿತು. ಒಂದು ಜಾತಿಯಲ್ಲಿ ಹುಟ್ಟಿದ ವ್ಯಕ್ತಿ ಆ ಜಾತಿಗೆ ಸಂಬಂಧ ಪಟ್ಟ ವೃತ್ತಿಯನ್ನೇ ಕೈಗೊಳ್ಳಬೇಕೆಂಬ ನಿಯಮ ಏರ್ಪಟ್ಟಿತು. ವೇದಗಳ ನಂತರದ ಕಾಲದಲ್ಲಿ ವರ್ಣವ್ಯವಸ್ಥೆಯಲ್ಲಿ ಪರಿವರ್ತನೆಗಳಾಗಿ ವರ್ಣಗಳೊಳಗೆ ಮೇಲು ಕೀಳುಗಳೆಂಬ ಭಾವನೆಗಳು ಬಲಿತು ವರ್ಣಭೇದ ಆರಂಭವಾಗಿ ನಾಲ್ಕು ವರ್ಣಗಳು ಪ್ರತ್ಯೇಕ ವಲಯಗಳಾಗಿ ಮಾರ್ಪಟ್ಟವು. ಕ್ರಮೇಣ ವರ್ಣಗಳು ವರ್ಗಗಳಾಗಿ, ವರ್ಗಗಳೇ ಜಾತಿಗಳಾಗಿ ಪರಿಣಮಿಸಲ್ಪಟ್ಟವು.

ವೇದ ಕಾಲದ ಸಮಾಜದಲ್ಲಿ ಅನೇಕ ವೃತ್ತಿಗಳು ಅಸ್ತಿತ್ವದಲ್ಲಿದ್ದವು. ಆದರೆ ಯಾವುದೇ ವೃತ್ತಿಗಳನ್ನು ನಿಕೃಷ್ಟವೆಂದು ಭಾವಿಸಲಾಗಿರಲಿಲ್ಲ. ಮತ್ತು ಯಾವ ವೃತ್ತಿಗಳೂ ವಂಶಾನುಗತಗಳಾಗಿರಲಿಲ್ಲ. ಆದರೆ ಋಗ್ವೇದದ ನಂತರದ ಕಾಲದಲ್ಲಿ ವೃತ್ತಿಗಳು ವಂಶಾನುಗತ ಅಂಗೀಕಾರವನ್ನು ಪಡೆದು ಆಯಾ ಜಾತಿಗಳಿಗೆ ಆಯಾ ವೃತ್ತಿಗಳು ನಿಗದಿಯಾಗಲ್ಪಟ್ಟವು. ಹೀಗೆ ಬೇರೆ ಬೇರೆ ಜಾತಿಯವರು ತಮ್ಮ ತಮ್ಮ ಕಸುಬುಗಳನ್ನು ವಂಶಾನುಗತಗೊಳಿಸಿಕೊಂಡಂತೆ ಬ್ರಾಹ್ಮಣರು ವಿದ್ಯೆಯನ್ನು ತಮಗೆ ಏಕಸ್ವಾಮ್ಯಗೊಳಿಸಿಕೊಂಡರು.

ಈ ರೀತಿಯಲ್ಲಿ ಜಗತ್ತಿನ ಬೇರಾವ ದೇಶಗಳಲ್ಲೂ ಇಲ್ಲದಷ್ಟು ಜಾತಿ ಉಪಜಾತಿಗಳು ಈ ದೇಶದಲ್ಲಿವೆ. ಆದ್ದರಿಂದಲೇ ಇಲ್ಲಿನ ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ಗಮನಿಸಿದ ಪಾಶ್ಚಾತ್ಯ ವಿದ್ವಾಂಸನಾದ ಡಾ. ವಿ. ಎ. ಸ್ಮಿತ್ ಭಾರತವನ್ನು "ಜನಾಂಗಗಳ ಮ್ಯೂಸಿಯಂ" (Ethnologial Museum) ಎಂದು ಕರೆದಿರುವುದು ಅರ್ಥಪೂರ್ಣವಾಗಿದೆ. ಒಟ್ಟಾರೆ ಭಾರತದ ಜಾತಿಗಳು ಭಾರತವನ್ನು ಏಕಸಂಸ್ಕೃತಿಯ ನಾಡನ್ನಾಗಿಸದೆ ಬಹುಸಂಸ್ಕೃತಿಯ ಬೀಡನ್ನಾಗಿಸಿವೆ.

ಆದರೆ ಆರ್ಯರ ಆಗಮನದ ನಂತರ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ವರ್ಗ ಭೇದಗಳು ಉಂಟಾಗಿ ವೃತ್ತಿ ಆಧಾರಿತ ಪಂಗಡಗಳು ಧಾರ್ಮಿಕ ಪಂಥಗಳಾಗಿ, ಜಾತಿ ಉಪ ಜಾತಿಗಳಾಗಿ ಸಮಾಜ ವ್ಯವಸ್ಥೆಯಲ್ಲಿ ಸಂಕೀರ್ಣತೆ ಉಂಟಾಯಿತು. ಧರ್ಮ ಧರ್ಮಗಳ ನಡುವೆ, ಜಾತಿ ಜಾತಿಗಳ ನಡುವೆ ಮೇಲು ಕೀಳು ಭಾವನೆಗಳು ಬೆಳೆದು ಶ್ರೇಣೀಕೃತ ಸಮಾಜ ನಿರ್ಮಾಣವಾಯಿತು. ಕಾಲಾನಂತರದಲ್ಲಿ ಸಾಮಾಜಿಕ ವೈಷ್ಯಮ್ಯತೆ ಬೆಳೆದು ಜಾತಿ, ಜಾತಿಗಳ ನಡುವೆ ಅಡ್ಡ ಗೋಡೆಗಳು ಉಂಟಾಗಿ ಪ್ರತಿಯೊಂದು ಜಾತಿಯಲ್ಲೂ ಪ್ರತ್ಯೇಕವಾದ ಪದ್ಧತಿಗಳು, ಸಂಪ್ರದಾಯಗಳು, ಆಚಾರ ವಿಚಾರಗಳು ಬೆಳೆದು ಬಂದು ಜನನ, ಮದುವೆ, ಮರಣ ಮುಂತಾದ ಸಾಂಸ್ಕೃತಿಕ ಆಚರಣೆಗಳಲ್ಲಿ ವ್ಯತ್ಯಾಸಗಳು ಉಂಟಾದವು. ಹೀಗೆ ಸಂಸ್ಕೃತಿಯಲ್ಲಿ ಭಿನ್ನತೆ ಉಂಟಾಗಿ ಭಾರತ ಬಹುಸಂಸ್ಕೃತಿಯ ದೇಶವಾಯಿತು. ಹಿಂದೆ ವೃತ್ತಿಗಷ್ಟೇ ಸೀಮಿತವಾಗಿದ್ದ ಜಾತಿಗಳಲ್ಲಿ ಇಂದು ಪರಸ್ಪರ ನಿಷೇಧ ಕಟ್ಟು ಪಾಡುಗಳಿಂದಾಗಿ ಅಸ್ಪೃಶ್ಯತೆ ಅಸಮಾನತೆಗಳು ಹುಟ್ಟಿಕೊಂಡು ಸಾಮಾಜಿಕ ಸಾಮರಸ್ಯಕ್ಕೆ ಧಕ್ಕೆಯು ಉಂಟಾಗಿರುವುದು ಭಾರತ ದೇಶದ ದುರಂತವಾಗಿದೆ.

ಹೀಗೆ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಹಾಸು ಹೊಕ್ಕಾಗಿರುವ ಜಾತಿ, ಜನಾಂಗಗಳ ಸಾಂಸ್ಕೃತಿಕ ಇತಿಹಾಸವನ್ನು ಅಧ್ಯಯನ ಮಾಡುವುದು ಇಂದಿನ ಅವಶ್ಯಕತೆಯಾಗಿದೆ. ಈ ಉದ್ದೇಶದಿಂದ ಭಾರತೀಯ ಜಾತಿಸಂಕಥನದ ಹಿನ್ನೆಲೆಯಲ್ಲಿ ಉಪ್ಪಾರ ಜಾತಿ ಸಂಕಥನವನ್ನು ಪರಿಭಾವಿಸಲಾಗಿದೆ. ಇಂದು ಇತಿಹಾಸವನ್ನು ಪರಿಭಾವಿಸುವ ದೃಷ್ಟಿಕೋನ ಬದಲಾಗಿದೆ. ಇತಿಹಾಸವೆಂದರೆ ಕೇವಲ ಬರೀ ರಾಜಕೀಯ ಚರಿತ್ರೆಯಷ್ಟೇ ಅಲ್ಲ. ವಾಸ್ತವವಾಗಿ ಈ ನಾಡಿನ ಇತಿಹಾಸವನ್ನು ಕಟ್ಟಿದವರು, ಸಂಸ್ಕೃತಿಯನ್ನು ರೂಪಿಸಿದವರು ಯಾವುದೇ ಲಿಖಿತ ಪರಂಪರೆಯಿಲ್ಲದ ದುಡಿಮೆಗಾರರಾದ ಜನಸಾಮಾನ್ಯರು ಮತ್ತು ಸಮಾಜದ ಅಂಚಿನ ಜನರು. ಇಂತಹ ಚರಿತ್ರೆ ಇಲ್ಲದ ಸಮಾಜದ ಅಂಚಿನ ಜನರ, ಲಿಖಿತ ಪರಂಪರೆಯಿಲ್ಲದವರ ಚರಿತ್ರೆಯು ಇಂದಿನ ತುರ್ತಾಗಬೇಕಿದೆ.

ಇದುವರೆಗೂ ನಮ್ಮಲ್ಲಿ ಬರೀ ರಾಜಕೀಯ ಚರಿತ್ರೆಯ ಭಾಗವಾಗಿಯಷ್ಟೆ ನಮ್ಮ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ ಇತ್ಯಾದಿ ಘಟನೆಗಳು ಚಿತ್ರಿತವಾಗಿರುವುದು ಶೋಚನೀಯ ಸಂಗತಿ. ರಾಜ ಮಹಾರಾಜರುಗಳ, ಅಧಿಕಾರಿಗಳ ವೈಭವದ ಬದುಕಿಗೆ ಕಾರಣರಾದ ಜನಸಾಮಾನ್ಯರ ಬದುಕು ನಮ್ಮ ಇತಿಹಾಸದಲ್ಲಿ (ಪ್ರಭುತ್ವ, ವಸಾಹತುಶಾಹಿ ಮತ್ತು ಬಂಡವಾಳಶಾಹಿ ಪೋಷಿತ ಮೇಲ್ವರ್ಗದ ವಿದ್ವತ್ ವಲಯವು ಕಟ್ಟಿಕೊಟ್ಟ ಚರಿತ್ರೆಯಲ್ಲಿ) ಸಂಪೂರ್ಣವಾಗಿ ನಿರ್ಲಕ್ಷಿಸಲ್ಪಟ್ಟಿದೆ.

ಯಾವಾಗಲೂ ಸಮುದಾಯಗಳ ಬದುಕು ಜನ ಸಮುದಾಯಗಳ ನೆನಪುಗಳಲ್ಲಿ ಅಡಗಿರುತ್ತದೆಯೇ ಹೊರತು ಬರಹದ ದಾಖಲೆಗಳಲ್ಲಿ ಅಲ್ಲ. ಅವರಾಡುವ ಭಾಷೆ, ಕಲೆ, ಕಸುಬು, ಆಚರಣೆಗಳು ಎಲ್ಲವೂ

ಬದುಕಿನ ಅವಿಭಾಜ್ಯ ಅಂಗಗಳಾಗಿರುತ್ತವೆ. ನಮಗಿಂದು ಬೇಕಾಗಿರುವುದು ಸಮುದಾಯದ ಈ ಮೌಖಿಕ ಚರಿತ್ರೆ. ಇದು ಆಯಾ ಸಮುದಾಯದ ನೆನಪಿನಲ್ಲಿ ಉಳಿದಿರುತ್ತದೆ. ಆದ್ದರಿಂದ ಶಾಸನಗಳ ಸಾಲನ್ನು ಸೇರದ ಸಮುದಾಯಗಳು ತಮ್ಮ ಚರಿತ್ರೆಯನ್ನು ತಮ್ಮ ಬಳಿಯೇ ಉಳಿಸಿಕೊಂಡಿರುತ್ತವೆ. ಇಂತಹ ಜನಸಾಮಾನ್ಯರ ಇತಿಹಾಸವನ್ನು ತಿಳಿಯದೆ 'ಚರಿತ್ರೆಯ ಅಧ್ಯಯನ ಪರಿಪೂರ್ಣವೆನಿಸುವುದಿಲ್ಲ' ಈ ದೃಷ್ಟಿಯಿಂದ ಮೌಖಿಕ ಚರಿತ್ರೆಯ ಅಧ್ಯಯನ ಹೆಚ್ಚು ಮಹತ್ವ ಪಡೆದುಕೊಳ್ಳುತ್ತದೆ.

ಈ ಸಂದರ್ಭದಲ್ಲಿ ಫ್ರೆಂಚ್ ತತ್ವಜ್ಞಾನಿ ವೋಲ್ಟೇರ್‌ನ (Voltaire) ಮಾತುಗಳು ಗಮನಾರ್ಹವಾಗಿವೆ. 'ಒಂದು ನಾಡಿನ ಇತಿಹಾಸವೆಂದರೆ ಆ ನಾಡನ್ನು ಕಾಲದಿಂದ ಕಾಲಕ್ಕೆ ಆಳಿದ ರಾಜರ ಇತಿಹಾಸವೆಂಬ ಭಾವನೆ ಪ್ರಚಲಿತವಾಗಿದೆ. ನಾಡು ಎಂದರೆ ಅದನ್ನು ಆಳಿದ ರಾಜರು ಮಾತ್ರವಲ್ಲ, ಅಲ್ಲಿ ಬದುಕಿದ ಸಾಮಾನ್ಯ ಜನರೂ ಆಗಿದ್ದಾರೆ. ಒಂದು ದೇಶದ ನಿಜವಾದ ಇತಿಹಾಸವೆಂದರೆ ಆ ಸಾಮಾನ್ಯ ಜನತೆಯ ಇತಿಹಾಸ, ಜನತೆ ಬದುಕಿದ ರೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಅವರ ಜೀವನ ಸಮಸ್ಯೆಗಳು ಮತ್ತು ಅವರ ಜೀವನ ಮೌಲ್ಯಗಳು' ಎಂಬುದಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ. ಆದ್ದರಿಂದ ಜನ ಸಾಮಾನ್ಯರ ಸಾಂಸ್ಕೃತಿಕ ಬದುಕಿನ ವೈಶಿಷ್ಟ್ಯತೆಗಳೇ ಒಂದು ದೇಶದ ನಿಜವಾದ ಇತಿಹಾಸವಾಗಿರುವುದರಿಂದ ಜನಸಮುದಾಯದ ಅಧ್ಯಯನಗಳು ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುವ ಹಿನ್ನೆಲೆಯಲ್ಲಿ ಉಪ್ಪಾರ ಜಾತಿಸಂಕಥನವು ಮುಖ್ಯವಾಗುತ್ತದೆ.

ಭಾರತದಲ್ಲಿರುವ ಸಾವಿರಾರು ಜಾತಿಗಳಲ್ಲಿ ಒಂದಾಗಿರುವ ಉಪ್ಪಾರ ಜಾತಿಯು ಪ್ರಾಚೀನ ಸಮಾಜದಲ್ಲಿದ್ದ ಹದಿನೆಂಟು ಸಾಂಪ್ರದಾಯಿಕ ವೃತ್ತಿ ಜಾತಿಗಳಲ್ಲಿ ಒಂದಾಗಿದೆ. ಉಪ್ಪು ತಯಾರಿಕೆಯು ಇವರ ಪ್ರಮುಖ ವೃತ್ತಿಯಾಗಿತ್ತು. ಷಡ್ರಸಗಳಲ್ಲಿ ಒಂದಾಗಿದ್ದ ಮತ್ತು ಇಡೀ ಮನುಕುಲಕ್ಕೇ ಬೇಕಾಗಿದ್ದ ಉಪ್ಪನ್ನು ತಯಾರು ಮಾಡಿದವರೇ ಉಪ್ಪಾರರು. 'ಅವರ ಹೆಸರೇ ಹೇಳುವಂತೆ ಅವರ ಮೂಲ ಉದ್ಯೋಗ ಉಪ್ಪನ್ನು– ಮುಖ್ಯವಾಗಿ ನೆಲದ ಮಣ್ಣಿನಿಂದ ಉಪ್ಪನ್ನು ತಯಾರಿಸುವುದಾಗಿತ್ತು.' ಮಣ್ಣಿನಿಂದ ಉಪ್ಪನ್ನು ತಯಾರಿಸಿದ ಇವರು ನಿಜವಾಗಿ ಮಣ್ಣಿನ ಮಕ್ಕಳಾಗಿದ್ದರು. ಮಣ್ಣಿನಿಂದ ಉಪ್ಪನ್ನು ತಯಾರಿಸಿದವರು, ಮಣ್ಣಿನಿಂದ ಇಟ್ಟಿಗೆ ನಿರ್ಮಿಸಿದವರು, ಕೆರೆ, ಕಾಲುವೆ, ಬಾವಿ ತೋಡಿದವರು. ಮಣ್ಣಿನ ಮೂಲಕ ನಾಗರೀಕತೆಯ ಬೆಳವಣಿಗೆಗೆ ಕಾರಣರಾದವರು. 'ಮಣ್ಣಿನಿಂದ ಮಾಡಬಹುದಾದ ಎಲ್ಲ ಬಗೆಯ ವೃತ್ತಿಗಳ ತಂತ್ರಜ್ಞಾನ ಉಪ್ಪಾರರಿಂದಲೇ ಶೋಧಿತವಾಗಿರುವುದು' ಇದಕ್ಕೆ ಕುಲದ ಮೂಲಪುರುಷನಾದ ಭಗೀರಥನೆ ನಿದರ್ಶನವಾಗಿದ್ದಾನೆ.

ಹೀಗೆ ಜಗತ್ತಿನ ನಾಗರೀಕತೆಯ ಬೆಳವಣಿಗೆಗೆ ಕಾರಣರಾದ ಭಾರತೀಯ ಸಮಾಜ ಸಂಸ್ಕೃತಿಗೆ ಅಪಾರ ಕಾಣಿಕೆಯನ್ನಿತ್ತ ಜನಾಂಗವೊಂದು ಬ್ರಿಟೀಷ್ ಸರ್ಕಾರ ಜಾರಿಗೆ ತಂದ ಉಪ್ಪು ನಿಷೇಧ ಕಾಯ್ದೆಯಿಂದ ತನ್ನ ಮೂಲ ವೃತ್ತಿಯಿಂದ ವಂಚಿತವಾಗಿ ಬೇರೆ ಬೇರೆ ವೃತ್ತಿಗಳಿಗೆ ಸ್ಥಿತ್ಯಂತರಗೊಳ್ಳಬೇಕಾಯಿತು. ಭಾರತೀಯ ನೆಲ, ನುಡಿ, ಸಂಸ್ಕೃತಿಗೆ ಅಪಾರ ಕೊಡುಗೆಗಳನ್ನು ನೀಡಿದ ಜನಾಂಗವೊಂದು ಬ್ರಿಟೀಷ್ ಸರ್ಕಾರದ ಆರ್ಥಿಕ ದಾಹಕ್ಕೆ ಬಲಿಯಾಗಿ ಇತಿಹಾಸದ ಪುಟಗಳಿಂದ ಕಾಣೆಯಾಗಿರುವುದು ಭಾರತೀಯ ಸಾಮಾಜಿಕ ವ್ಯವಸ್ಥೆಯ ಅಸಮಾನತೆಗೆ ಸಾಕ್ಷಿಯಾಗಿದೆ.

ಇಂದು ಪ್ರತಿಯೊಂದು ಜಾತಿಯೂ ತನ್ನ ಸಮಾಜದ ಇತಿಹಾಸವನ್ನು ಮತ್ತು ಸಂಸ್ಕೃತಿಯನ್ನು ಶೋಧಿಸಿ ಮರುಚಿಂತನೆಗೆ ಒಳಪಡಿಸಿಕೊಳ್ಳಬೇಕಾಗಿದೆ. ಲಿಖಿತ ಪರಂಪರೆಯಲ್ಲಿ ಕಾಣೆಯಾಗಿರುವ ಸಂಗತಿಗಳನ್ನು ಶೋಧಿಸಿ ಪುನರ್ ರಚಿಸಿಕೊಳ್ಳಬೇಕಾಗಿದೆ. ಸಮುದಾಯದಲ್ಲಿ ಮೌಖಿಕ ರೂಪದಲ್ಲಿರುವ ಪದ್ಧತಿ ಮತ್ತು ಆಚರಣೆಗಳ ರೂಪದಲ್ಲಿರುವ ಮೌಖಿಕ ಚರಿತ್ರೆಯನ್ನು ಪರಿಶೀಲಿಸಿ ವಿಶ್ಲೇಷಣೆಗೆ ಒಳಪಡಿಸಿಕೊಳ್ಳುವ ಮೂಲಕ ಜನಾಂಗದ ಸಾಂಸ್ಕೃತಿಕ ಅನನ್ಯತೆಯನ್ನು ಕಂಡುಕೊಳ್ಳುವುದು ಮುಖ್ಯವಾಗಿದೆ. ಅಲ್ಲದೆ ಆಧುನಿಕತೆಯ ಪ್ರಭಾವದಿಂದ ಜನಾಂಗದ ಸಾಂಸ್ಕೃತಿಕ ಬದುಕಿನಲ್ಲಿ ಆಗಿರುವ ಸ್ಥಿತ್ಯಂತರಗಳನ್ನು ಪರಾಮರ್ಶಿಸುವುದು ಸಹ ಇಂದಿನ ಅಗತ್ಯವಾಗಿದೆ.

ಸಾಮಾನ್ಯವಾಗಿ ಪ್ರತಿಯೊಂದು ಕೆಳಜಾತಿಗಳ ಚಲನೆ ಸದಾ ಮೇಲ್ಮುಖವಾಗಿರುತ್ತದೆ. ಏಕೆಂದರೆ ಎಲ್ಲ **'**ಜಾತಿಗಳ ಒಡಲಿನಲ್ಲಿಯೂ ತಾನು ಸಾಮಾಜಿಕವಾಗಿ ಮೇಲಕ್ಕೆ ಏರಬೇಕೆಂಬ ಹಂಬಲ ತುಡಿಯುತ್ತಿರುತ್ತದೆ**'**. ಈ ತುಡಿತದ ಹಿನ್ನೆಲೆಯಲ್ಲಿ ಎಲ್ಲಾ ಕೆಳ ಜಾತಿಗಳು ಮೇಲ್ಜಾತಿಗಳ ವಿಧಿ ವಿಧಾನಗಳನ್ನು ಅನುಕರಿಸುತ್ತಲೇ ಇರುತ್ತವೆ. ಈ ಹಿನ್ನೆಲೆಯಲ್ಲಿ ಉಪ್ಪಾರ ಜನಾಂಗದ ಮದುವೆ, ನಾಮಕರಣ, ಗೃಹಪ್ರವೇಶ ಮುಂತಾದ ಸಾಂಸ್ಕೃತಿಕ ಆಚರಣೆಗಳ ಸಂದರ್ಭಗಳನ್ನು ಗಮನಿಸಿದಾಗ ಬಹುತೇಕವಾಗಿ ವೈದಿಕ ವಿಧಿ ವಿಧಾನಗಳು ಪ್ರವೇಶ ಮಾಡಿರುವುದು ಸ್ಪಷ್ಟವಾಗಿದೆ. ಬಹುತೇಕ ಉಪ್ಪಾರ ಮತ್ತು ಇತರೆ ಹಿಂದುಳಿದ ಜಾತಿಗಳಿರುವ ಕಡೆಗಳಲ್ಲಿ ಈ ರೀತಿಯ ಮೇಲ್ಮುಖ ಚಲನೆಯನ್ನು, ಮೇಲಕ್ಕೆ ಏರಬೇಕೆಂಬ ತುಡಿತವನ್ನು ಹೆಚ್ಚಿನ ಪ್ರಮಾಣದಲ್ಲಿ ಕಾಣುತ್ತೇವೆ. ಇದನ್ನೇ ಪ್ರಸಿದ್ಧ ಸಮಾಜಶಾಸ್ತ್ರಜ್ಞರಾದ ಎಂ. ಎನ್. ಶ್ರೀನಿವಾಸರವರು ಸಂಸ್ಕೃತೀಕರಣ ಎಂದು ಕರೆದಿರುವುದು.

ಈ ರೀತಿಯ ಸಂಸ್ಕೃತಿಯ ಚಲನಶೀಲತೆಯ ಹಾದಿಯಲ್ಲಿ ಇತ್ಯಾತ್ಮಕ ಅಂಶಗಳನ್ನು ಮೈಗೂಡಿಸಿಕೊಂಡಂತೆ ನೇತ್ಯಾತ್ಮಕ ಅಂಶಗಳೂ ಸೇರಿಕೊಳ್ಳುತ್ತವೆ. ಈ ಬಗೆಯ ಸಾಮಾಜಿಕ ಬದಲಾವಣೆಯ ಹೊಡೆತಕ್ಕೆ ಸಿಕ್ಕು, ಹೊಸತನಕ್ಕೆ ಕಟ್ಟುಬಿದ್ದು ಸಮುದಾಯ ತಮ್ಮ ಆಚರಣೆಗಳನ್ನು ರೂಪಾಂತರಿಸಿಕೊಂಡಿದೆ. ಅದೇ ರೀತಿ ಆಯಾ ಪ್ರದೇಶದ ಪ್ರಬಲವಾದ ಸಂಸ್ಕೃತಿಯ ಪ್ರಭಾವದಿಂದ ಪರಿಷ್ಕರಿಸಿಕೊಂಡ ಆಚರಣೆಗಳನ್ನು ಕಾಣುತ್ತೇವೆ. ಹಾಗಾಗಿ ಸಂಪ್ರದಾಯ, ಆಚರಣೆಗಳು ಸಮಾಜ ಮತ್ತು ಬದುಕಿನ ಬದಲಾವಣೆಗಳೊಂದಿಗೆ ಬದಲಾಗಬೇಕಾಗುತ್ತದೆ. ಅಂತೆಯೇ ಉಪ್ಪಾರ ಸಮುದಾಯವೂ ಈ ರೀತಿಯ ಸಾಂಸ್ಕೃತಿಕ ಸ್ಥಿತ್ಯಂತರಕ್ಕೆ ಒಳಗಾಗಿ ಬದಲಾಗಿದೆ.

ಹೀಗೆ ಬದಲಾವಣೆಯ ಪ್ರಕ್ರಿಯೆ ವ್ಯಕ್ತಿ ಮತ್ತು ಸಮಾಜಕ್ಕೆ ಅನಿವಾರ್ಯ ಪ್ರಕ್ರಿಯೆಯಾಗಿದೆ. ಇದರಿಂದ ಯಾವ ಸಮುದಾಯಗಳೂ ಹೊರತಾಗಿರಲು ಎಂದಿಗೂ ಸಾಧ್ಯವಾಗಿಲ್ಲ. ನಾಗರಿಕತೆಯಿಂದ ದೂರಾಗಿದ್ದ ಅತ್ಯಂತ ಹಿಂದುಳಿದ ಆದಿವಾಸಿಗಳಲ್ಲಿ, ಬುಡಕಟ್ಟುಗಳ ಸಮುದಾಯಗಳಲ್ಲಿಯೂ ಬದಲಾವಣೆ ಆಗುತ್ತಿರುವುದು ಎಲ್ಲರ ಗಮನಕ್ಕೂ ಬರುತ್ತಿದೆ. ಹೀಗೆ ಆಧುನಿಕ ಸಮಾಜದ ಪ್ರೇರಣೆ, ಪ್ರಭಾವಗಳು ಎಲ್ಲಾ ಸಮುದಾಯಗಳ ಮೇಲೂ ಆಗುವ ಮೂಲಕ 'ಸಮುದಾಯಗಳ ಪಾರಂಪರಿಕ ಜ್ಞಾನ, ಆಚಾರ ವಿಚಾರಗಳಲ್ಲಿ ಬದಲಾವಣೆ ಆಗುತ್ತಿದೆ' ಒಟ್ಟಾರೆ ಬದಲಾವಣೆಯಿಂದ ಯಾವ ಸಮುದಾಯಗಳೂ ಹೊರತಲ್ಲವೆಂಬ ಅಂಶವು ಸ್ಪಷ್ಟವಾಗಿದೆ.

ಭಾರತದ ಉದ್ದಗಲಕ್ಕೂ ವ್ಯಾಪಿಸಿಕೊಂಡಿರುವ ಉಪ್ಪಾರರು ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತಿದ್ದು, ಆಯಾ ಪ್ರದೇಶದ ಭಾಷೆಗಳನ್ನಾಡುತ್ತಾರೆ. ಪಿಂಜಾರ ಜನಾಂಗವನ್ನು ಕುರಿತಂತೆ ಡಾ. ದಾದಾಪೀರ್ ನವಿಲೇಹಾಳ್‌ರವರು ಹೇಳುವ ಮಾತುಗಳನ್ನು ಉಪ್ಪಾರರಿಗೂ ಅನ್ವಯಿಸಿಕೊಂಡಂತೆ ಹೇಳುವುದಾದರೆ 'ಉಪ್ಪಾರರು ಸಮಾಜದಲ್ಲಿ ಸಾಮಾಜಿಕ ಅಪಮಾನದ ಶಾಪವನ್ನು ಎದುರಿಸುವ ದಲಿತರ ನೆಲೆಯೂ ಅಲ್ಲದ, ಶ್ರೀಮಂತ ಶೂದ್ರ ವರ್ಗದ ಪಾಳೇಗಾರಿಕೆಯ ನೆಲೆಯೂ ಅಲ್ಲದ ಬಡತನ, ಅಂಧಶ್ರದ್ಧೆ, ಕಠಿಣ ಪರಿಶ್ರಮದ ಸಾಮಾನ್ಯ ಹಿಂದುಳಿದ ಜನಸಮುದಾಯಗಳ ವರ್ಗಕ್ಕೆ ಸೇರಿದ ಬಹುಸಂಖ್ಯಾತರಾಗಿದ್ದಾರೆ' ಎನ್ನುವ ಮಾತುಗಳು ಉಪ್ಪಾರರನ್ನು ಕುರಿತಂತೆ ಸಮಂಜಸವೆನಿಸುತ್ತವೆ.

ಬ್ರಿಟೀಷರು ಜಾರಿಗೆ ತಂದ ಉಪ್ಪು ಉತ್ಪಾದನೆಯ ನಿಷೇಧ ಕಾಯ್ದೆಯಿಂದಾಗಿ ತಮ್ಮ ವೃತ್ತಿ ಕೈ ತಪ್ಪಿ ಹೋದ ಮೇಲೆ ಜೀವನೋಪಾಯಕ್ಕಾಗಿ ಸೊಪ್ಪು, ತರಕಾರಿ, ವ್ಯವಸಾಯ, ಗಾರೆಕೆಲಸ, ಕೂಲಿಕೆಲಸ, ಮತ್ತಿತರೆ ಕೆಲಸಗಳನ್ನು ಮಾಡಿಕೊಂಡಿರುವ ಇವರು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ನೆಲಸಿದ್ದಾರೆ. ಪ್ರಾದೇಶಿಕ ಭಿನ್ನತೆಗೆ ಅನುಗುಣವಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುವ, ಇವರನ್ನು ಸಾಮಾನ್ಯವಾಗಿ ಉಪ್ಪಾರರು, ಮೇಲುಸಕ್ಕರೆಯವರೆಂದು ಕರೆಯಲ್ಪಡುತ್ತಾರೆ. ಉತ್ತರ ಕರ್ನಾಟಕದ ಬೆಳಗಾವಿ, ಬಾಗಲಕೋಟೆ ಮುಂತಾದ ಜಿಲ್ಲೆಗಳಲ್ಲಿ ಬೇಲ್ದಾರ್, ಲೋನಾರಿ, ಗಾವಂಡಿಗಳು ಎಂದು ಕರೆಯಲಾಗುತ್ತಿದೆ. ದಕ್ಷಿಣ ಕರ್ನಾಟಕದ ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಮುಂತಾದ ಜಿಲ್ಲೆಗಳಲ್ಲಿ ಉಪ್ಪಾರಗೌಡ, ಉಪ್ಪಾರಸೆಟ್ಟಿ ಎಂದು ಕರೆಯುತ್ತಾರೆ. ಮಧ್ಯ ಕರ್ನಾಟಕದಲ್ಲಿ ಸಾಮಾನ್ಯವಾಗಿ ಉಪ್ಪಾರರೆಂದು ಕರೆಯಲ್ಪಡುತ್ತಾರೆ.

**ಉಪಸಂಹಾರ**

ಸಮಾಜದ ಸರ್ವಾಂಗೀಣ ಭೌತಿಕ ಪ್ರಗತಿಗೆ ಅಡಿಪಾಯ ಹಾಕಿದವರಲ್ಲಿ ಉಪ್ಪಾರರು ಮತ್ತು ಒಡ್ಡರು ಪ್ರಮುಖರಾಗಿದ್ದಾರೆ. ಇಡೀ ಮನುಕುಲಕ್ಕೆ ಬೇಕಾದ ಉಪ್ಪನ್ನು ತಯಾರಿಸಿ ಕೊಟ್ಟ ಇವರು ಕೃಷಿಗೆ ಅಗತ್ಯವಾದ ನೀರಿನ ಸೌಕರ್ಯ ಕಲ್ಪಿಸಿ ಕೊಟ್ಟರು. ಮನೆಗಳನ್ನು ಕಟ್ಟಿಕೊಟ್ಟರು. ನಂತರದ ಕಾಲಘಟ್ಟದಲ್ಲಿ ಅರಸೊತ್ತಿಗೆಗೆ ಬೇಕಾದ ಕೋಟೆಕೊತ್ತಲಗಳನ್ನು, ಅರಮನೆಗಳನ್ನೂ ಸೋದರ ಕುಲವಾದ ಒಡ್ಡರೊಂದಿಗೆ ಕಟ್ಟಿಕೊಟ್ಟ ಇವರು ಬ್ರಿಟೀಷರು ಜಾರಿಗೆ ತಂದ ಕರಾಳ ಕಾಯ್ದೆಯಿಂದ ತಮ್ಮ ಮೂಲ ಕಸುಬನ್ನು ಕಳೆದುಕೊಂಡು ಜೀವನಾಧಾರಕ್ಕಾಗಿ ಬೇರೆ ಬೇರೆ ಕಸುಬುಗಳನ್ನಾಶ್ರಯಿಸಿ ಶ್ರಮ ಜೀವಿಗಳಾಗಿ ಬದುಕುತ್ತಿರುವ 'ಉಪ್ಪಾರರ ಸಂಸ್ಕೃತಿ' ಮೈಲುಗಲ್ಲಾಗಿದೆ.

**ಪರಾಮರ್ಶನ ಗ್ರಂಥಗಳು**


- ಅಂಬಳಿಕೆ ಹಿರಿಯಣ್ಣ. (1999). ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ಕಲ್ಬುರ್ಗಿ. ಎಂ. ಎಂ. (2001). ಸಮಗ್ರ ವಚನ ಸಂಪುಟ – 1. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ಗಂಗಾಧರ ದೈವಜ್ಞ. (2000). ಬುಡಕಟ್ಟು ಸಮಾಜ ಹುಟ್ಟು–ಸಾ"ನ ನಡುವೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

- ನಾಗರಾಜು. ಎಂ. ಎಚ್. (2003). ಕುಂಚಿಟಿಗರ ಸಾಂಸ್ಕೃತಿಕ ಇತಿಹಾಸ. ಸ. ಪ. ಪೂ. ಕಾ. ಬಿಳಿಗೆರೆ, ತಿಪಟೂರು ತಾಲೂಕು.
- ಶ್ರೀ ಲೇಪಾಕ್ಷ ಸ್ವಾಮಿಗಳು. (1999). ಶ್ರೀ ಉಪ್ಪಾರ ಚರಿತಾಮೃತ. ಭಗೀರಥ ಸಂಕಲ್ಪ ಟ್ರಸ್ಟ್. ಕುಷ್ಟಗಿ, ಕೊಪ್ಪಳ ಜಿಲ್ಲೆ.
- ಸಣ್ಣರಾಮ. (1999). ಲಂಬಾಣಿ ಸಂಸ್ಕೃತಿ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
- ಸುಬ್ಬಣ್ಣ ರೈ. ಎ. ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು. (1994). ಕನ್ನಡ "ಭಾಗ, ಮುಂಬೈ ವಿಶ್ವವಿದ್ಯಾಲಯ, ಮುಂಬೈ.
- ಸೂರ್ಯನಾಥ. ಯು. ಕಾಮತ್. (ಮು.ಸಂ) (1984). ಕರ್ನಾಟಕ ರಾಜ್ಯ ಗ್ಯಾಜೆಟಿಯರ್. ಭಾ–1. ಕರ್ನಾಟಕ ಸರ್ಕಾರ, ಬೆಂಗಳೂರು.
- ಹಿರೇಮಠ್. ಎಸ್. ಎಸ್. (1998) ಉಪ್ಪಾರರು. ತಾಲ್ಲೂಕು ಉಪ್ಪಾರ ನೌಕರರ ಸಂಘ, ಹರಪನಹಳ್ಳಿ,